8	ಚಿಕ್ಕಮಗಳೂರು	22	ಕಡೂರು	6
9	ರಾಯಚೂರು	23	ದೇವದುರ್ಗ	3
		24	ಲಿಂಗಸುಗೂರು	4
		25	ರಾಯಚೂರು	1
10	ಶಿವಮೊಗ್ಗ	26	ಸಾಗರ	1
11	ಮೈಸೂರು	27	ಹೆಚ್.ಡಿ.ಕೋಟೆ	1
		ಒಟ್ಟು		218

ಹೊಸದಾಗಿ ಮಾಸೂರ ಹೋಬಳಿ ರಚನೆ ಮಾಡುವುದು

2096 (1101); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನಲ್ಲಿನ ಮಾಸೂರನ್ನು ಹೋಬಳಿ ಕೇಂದ್ರವನ್ನಾಗಿ ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಮಾಸೂರ ಹೋಬಳಿ ರಚನೆ ಮಾಡಲಾಗುವುದು?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) & (ಆ) ಮಾಸೂರನ್ನು ಹೋಬಳಿಯನ್ನಾಗಿ ಅಧಿಸೂಚಿಸಲು ಅನುವಾಗುವಂತೆ ದಿನಾಂಕ: 13-03-2014ರ ಪತ್ರದಲ್ಲಿ ಪೂರ್ಣ ಪ್ರಮಾಣದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ ಇವರಿಗೆ ನಿರ್ದೇಶಿಸಲಾಗಿರುತ್ತದೆ. ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಿ ಮಾಸೂರನ್ನು ಹೋಬಳಿ ಕೇಂದ್ರವನ್ನಾಗಿ ಅಧಿಸೂಚಿಸಲು ಕ್ರಮ ವಹಿಸಲಾಗುವುದು.